


# ನೋಟ್‌ಬುಕ್ ಇಂಪೋರ್ಟ್ ಜೆಮಿನಿ ಎಐನ ಆಲ್‌ರೌಂಡರ್

**ಗೂಗಲ್‌ನ ಜೆಮಿನಿ ಎಐಗೆ ಆಲ್‌ರೌಂಡರ್ ಕಾಲಿಟ್ಟಿದ್ದು, ಈ ಫೀಚರ್ 'ಆಲ್ ಇನ್ ಒನ್' ಕೆಲಸ ಮಾಡಲಿದೆ. ಹಾಗಿದ್ದರೆ ಏನಿದು?**

■ ಶಶಿಕುಮಾರ್ ಸಿ.

ನೋಟ್‌ಬುಕ್ ಇಂಪೋರ್ಟ್, ಇದು ಗೂಗಲ್‌ನ ಜನಪ್ರಿಯ 'ಜೆಮಿನಿ ಎಐ' ವೇದಿಕೆಯಲ್ಲಿ ಶೀಘ್ರವೇ ಕಾಣಿಸಿಕೊಳ್ಳಲಿರುವ ಹೊಸ ಫೀಚರ್. ಈ ಬಗ್ಗೆ ಗೂಗಲ್ ಈಚೆಗೆ ಮಾಹಿತಿ ಹಂಚಿಕೊಂಡಿದ್ದು, ಎಐ ಕ್ಷೇತ್ರದಲ್ಲಿ ಇದು ಮಹತ್ತರ ಕಾರ್ಯನಿರ್ವಹಿಸಲಿದೆ. ಕೃತಕ ಬುದ್ಧಿಮತ್ತೆ ವೇದಿಕೆಗಳಲ್ಲಿ ಬಳಕೆಸ್ನೇಹಿಯಾಗಿರುವ 'ಜೆಮಿನಿ ಎಐ' ವೇದಿಕೆಯನ್ನು ಹಂತ ಹಂತವಾಗಿ 'ಆಲ್ ಇನ್ ಒನ್' ಆಗಿ ಪರಿವರ್ತಿಸುವ ಉದ್ದೇಶವನ್ನು ಹೊಂದಿರುವ ಗೂಗಲ್, ಆ ಭಾಗವಾಗಿ ಈ ಫೀಚರ್ ಪರಿಚಯಿಸಿದೆ.

ಹೆಸರೇ ಸೂಚಿಸುವಂತೆ ಈ ಫೀಚರ್ ನೋಟ್‌ಬುಕ್‌ನಂತೆ 'ಜೆಮಿನಿ ಎಐ'ನಲ್ಲಿ ಕಾರ್ಯನಿರ್ವಹಿಸಲಿರುವ ಒಂದು ಎಐ ಟೂಲ್. ಬಳಕೆದಾರರು ತಮ್ಮ ಫೈಲ್‌ಗಳು, ಡೇಟಾ ಮತ್ತು ಟಿಪ್ಪಣಿಗಳನ್ನು ಒಂದೇ ಸ್ಥಳದಲ್ಲಿ ಸರಾಗವಾಗಿ ನಿರ್ವಹಿಸಲು ಅನುವು ಮಾಡಿಕೊಡುವ ಜೆಮಿನಿ ಎಐ, ಅವುಗಳನ್ನು ಇಂಪೋರ್ಟ್ ಮಾಡಲೂ ಅವಕಾಶ ಕಲ್ಪಿಸುತ್ತದೆ. ಇದರಿಂದ ಅಗತ್ಯವಾದದ್ದನ್ನೆಲ್ಲ ಒಂದೇ ಕಡೆ ಸರಳವಾಗಿ ನಿರ್ವಹಿಸಬಹುದು ಹಾಗೂ ಬಳಸಬಹುದು.

'ಜೆಮಿನಿ ಎಐ'ನ ಅಟ್ಯಾಚ್‌ಮೆಂಟ್ ವಿಭಾಗದಲ್ಲಿ ಇಮೇಜ್, ಫೈಲ್ ಮತ್ತು ಕೋಡ್ ಇಂಪೋರ್ಟ್ ಸೇರಿದಂತೆ ಮುಂತಾದ ಆಯ್ಕೆಗಳಿವೆ. ಈ ಪಟ್ಟಿಗೆ ಶೀಘ್ರವೇ ಆ್ಯಡ್ ನೋಟ್‌ಬುಕ್ ಅಥವಾ ನೋಟ್‌ಬುಕ್ ಇಂಪೋರ್ಟ್ ಫೀಚರ್ ಸಹ ಸೇರ್ಪಡೆಯಾಗಲಿದೆ. ಅಂದರೆ, ಬಳಕೆದಾರರು ತಮ್ಮ ನೋಟ್‌ಬುಕ್‌ಎಲ್‌ಎಂನಲ್ಲಿ ಈ ಹಿಂದೆ ರಚಿಸಿದ ನೋಟ್‌ಗಳನ್ನು ಜೆಮಿನಿಗೆ ಇಂಪೋರ್ಟ್ ಮಾಡಿಕೊಳ್ಳಬಹುದು ಮತ್ತು ತಮ್ಮ ಕೆಲಸವನ್ನು ಚಾಟ್‌ನಿಂದಲೇ ಶುರು ಮಾಡಬಹುದು ಹಾಗೂ ಅಲ್ಲಿಂದಲೇ ಪೂರ್ಣಗೊಳಿಸಬಹುದು. ಸಂಶೋಧನೆ, ಡೇಟಾ ವಿಶ್ಲೇಷಣೆ ಅಥವಾ ದಾಖಲೆ ಆಧಾರಿತವಾಗಿ ಕೆಲಸ ಮಾಡುವವರಿಗೆ ಈ ಆಯ್ಕೆಯು ಪ್ರಮುಖ ಅಸ್ತ್ರವಾಗಲಿದೆ.

## ಏನಿದು ನೋಟ್‌ಬುಕ್ ಇಂಪೋರ್ಟ್

ನೋಟ್‌ಬುಕ್ ಇಂಪೋರ್ಟ್ ಫೀಚರ್ ಬಳಕೆದಾರರಿಗೆ ತಮ್ಮ 'ನೋಟ್‌ಬುಕ್‌ಎಲ್‌ಎಂ'ನಲ್ಲಿ (ನೋಟ್‌ಬುಕ್ ಲ್ಯಾಂಗ್ವೇಜ್ ಮಾಡ್ಯೂಲ್) ರಚಿಸಿದ ಸಂಘಟಿತ ಮಾಹಿತಿ ಸಂಗ್ರಹಗಳನ್ನು ನೇರವಾಗಿ ಜೆಮಿನಿ ಎಐ ಸಂಭಾಷಣೆಗಳಿಗೆ ಆಮದು ಮಾಡಿಕೊಳ್ಳಲು ಅನುಮತಿಸುವ ವಿಧಾನವಾಗಿದೆ. ನೋಟ್‌ಬುಕ್‌ಎಲ್‌ಎಂ ಎನ್ನುವುದು ಬಳಕೆದಾರರು ಅಪ್‌ಲೋಡ್ ಮಾಡಿದ ದಾಖಲೆಗಳ ಮಾಹಿತಿ ಆಧರಿಸಿ ಕಾರ್ಯನಿರ್ವಹಿಸುವ ಸಂಶೋಧನಾ ಮತ್ತು ಟಿಪ್ಪಣಿ ಮಾಡುವ ಸಾಧನವಾಗಿದೆ. ಇದು ಸಾಮಾನ್ಯ ತರಬೇತಿ ದತ್ತಾಂಶದಿಂದ ಉತ್ತೇಕ್ಷೆಗೊಳ್ಳದೆ, ಭ್ರಮೆಗೆ ಒಳಗಾಗದೆ ಬಳಕೆದಾರರು ಒದಗಿಸಿದ ಮೂಲ ದಾಖಲೆಗಳ ಮಾಹಿತಿಯ ಮೇಲಷ್ಟೇ ಕಣ್ಣು ಹಾಯಿಸಲಿದೆ. ಇದರಿಂದ ಮೂಲ ದಾಖಲೆಗಳ ಮಾಹಿತಿಯ ನಿಖರತೆಗೆ ಧಕ್ಕೆಯಾಗದು.




### ಫೀಚರ್‌ನ ಪ್ರಮುಖ ಅಂಶಗಳು

- 'ಜೆಮಿನಿ ಎಐ'ನಲ್ಲಿ ಈ ಫೀಚರ್ ಕಾಣಿಸಿಕೊಂಡ ನಂತರ, ಬಹು ಟ್ಯಾಬ್‌ಗಳು ಅಥವಾ ಅಪ್ಲಿಕೇಷನ್‌ಗಳನ್ನು ನೀವು ತೆರೆಯುವ ಅಗತ್ಯವಿಲ್ಲ. ಬಳಕೆದಾರರು ಕೈಗೊಂಡ ಸಂಶೋಧನೆ, ಟಿಪ್ಪಣಿಗಳು, ದಾಖಲೆಗಳು ಮತ್ತು ಎಐ ವಿಶ್ಲೇಷಣೆ ಎಲ್ಲವೂ ಒಂದೇ ಸ್ಥಳದಲ್ಲಿ ಲಭ್ಯವಾಗಲಿದೆ. ಅಂದರೆ, 'ಜೆಮಿನಿ ಎಐ'ನ ಚಾಟ್ ವಿಂಡೊವೊಂದರಲ್ಲೇ ಇದು ಸಿಗಲಿದೆ.
- ಇದು ಸ್ವಚ್ಛ, ಸಂಘಟಿತ ಟಿಪ್ಪಣಿಗಳನ್ನು ರಚಿಸುವ ಸಾಮರ್ಥ್ಯ ಹೊಂದಿದೆ. ಬುಲೆಟ್ ಪಾಯಿಂಟ್‌ಗಳು, ಸಾರಾಂಶಗಳು, ಪ್ರಮುಖ ಅಂಶಗಳು ಸಿದ್ಧವಾಗಿಯೇ ನಿಮ್ಮ ಮುಂದೆ ತೆರೆದುಕೊಳ್ಳಲಿವೆ. ನೋಟ್‌ಬುಕ್ ಇಂಪೋರ್ಟ್ ಬಳಸಿಕೊಂಡು ನೈಜ ಸಮಯದ ನೆರವಿನೊಂದಿಗೆ (ಲೈವ್ ಹೆಲ್ಪ್) ಕೆಲಸ ಮಾಡಬಹುದು. ಸಂಬಂಧಿತ ಅಂಶಗಳನ್ನಷ್ಟೇ ವಿವರಿಸುವ ಮೂಲಕ ಸಂಶೋಧನೆಯನ್ನು ತಕ್ಷಣವೇ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.
- ಇಲ್ಲಿ ಬಹು ಪ್ರಕಾರದ ಫೈಲ್‌ಗಳು ಅಂದರೆ, ಪಿಡಿಎಫ್‌ಗಳು, ಡಾಕ್ಯುಮೆಂಟ್‌ಗಳು, ಲಿಂಕ್‌ಗಳು, ಸಂಶೋಧನಾ ಪತ್ರಿಕೆಗಳು ಹಾಗೂ ಇತ್ಯಾದಿಗಳನ್ನು ಸುಲಭವಾಗಿ ಅಪ್‌ಲೋಡ್ ಮಾಡಬಹುದು. ಅವುಗಳೆಲ್ಲವನ್ನೂ ನೋಟ್‌ಬುಕ್ ಇಂಪೋರ್ಟ್ ಓದುತ್ತದೆ. ಅದರಲ್ಲಿನ ಸಾರಾಂಶಗಳನ್ನು ತ್ವರಿತವಾಗಿ ಹೋಲಿಕೆ ಮಾಡಿ, ಆಳವಾದ ವಿಶ್ಲೇಷಣೆ, ಪ್ರಮುಖಾಂಶಗಳನ್ನು ಒದಗಿಸುತ್ತದೆ.

### ಹೇಗೆ ಕೆಲಸ ಮಾಡಲಿದೆ?

ನೋಟ್‌ಬುಕ್‌ಎಲ್‌ಎಂನಿಂದ ಮಾಹಿತಿಯನ್ನು ಜೆಮಿನಿ ಎಐಗೆ ವರ್ಗಾಯಿಸಲು ನಾವಾಗಿಯೇ ನಕಲಿಸುವುದು (manual copying) ಅಥವಾ ಅಪ್ಲಿಕೇಷನ್‌ಗಳ ನಡುವೆ ಸಂದರ್ಭೋಚಿತವಾಗಿ ಬದಲಾಯಿಸುವುದನ್ನು (contextswitching) ಈಗ ಮಾಡಬೇಕಿದೆ. ನೋಟ್‌ಬುಕ್ ಇಂಪೋರ್ಟ್ ಈ ಪ್ರಕ್ರಿಯೆಯನ್ನು ತೀರ ಸರಳವಾಗಿಸಿದೆ.

ನೋಟ್‌ಬುಕ್ ಇಂಪೋರ್ಟ್, ಬಳಕೆದಾರರು ತಮ್ಮ ಸಂಶೋಧನಾ ಪ್ರತಿಗಳ ಸಂಗ್ರಹವನ್ನು ನೇರವಾಗಿ ಜೆಮಿನಿ ಎಐಗೆ ವರ್ಗಾಯಿಸುತ್ತದೆ. ಬಳಕೆದಾರರು ಒಂದು ಯೋಜನೆಯ ಕುರಿತು ನೋಟ್‌ಬುಕ್‌ಎಲ್‌ಎಂನಲ್ಲಿ 50 ಲೇಖನಗಳನ್ನು ವಿಶ್ಲೇಷಿಸಿ ಟಿಪ್ಪಣಿಗಳನ್ನು ತೆಗೆದುಕೊಂಡಿದ್ದಾರೆ ಎಂದಿಟ್ಟುಕೊಳ್ಳಿ, ಆ ಸಂಪೂರ್ಣ ನೋಟ್‌ಬುಕ್ ಅನ್ನು ಜೆಮಿನಿ ಎಐಗೆ ಒಂದು ಕ್ಲಿಕ್‌ನಲ್ಲಿ ಆಮದು ಮಾಡಬಹುದು. ನಂತರ, ಆ ಸಂಶೋಧನಾ ಲೇಖನಗಳ ಪ್ರಮುಖ ಅಂಶಗಳು ಅಥವಾ ಸಂಶೋಧನಾ ಲೇಖನಗಳ ಕುರಿತು ಪ್ರೆಸೆಂಟೇಷನ್ ಒದಗಿಸುವಂತೆ ಜೆಮಿನಿ ಎಐಗೆ ಕೇಳಬಹುದು. ■